ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	:	14 (208)
ಸದಸ್ಯರ ಹೆಸರು	:	ಶ್ರೀ. ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	13.09.2021
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮಂಡ್ಯ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಪ್ರೌಢಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ಕೋರಿ ಸಲ್ಲಿಕೆಯಾದ ಪ್ರಸ್ತಾವನೆಗಳು ಎಷ್ಟು; ಅಂತಹ ಪ್ರಸ್ತಾವನೆಗಳು ಪ್ರಸ್ತುತ ಯಾವ ಹಂತದಲ್ಲಿವೆ; (ವಿವರವಾದ ಮಾಹಿತಿ ನೀಡುವುದು)</td><td>ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಅನುಮತಿ ಕೋರಿ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.

ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ಕೋರಿ 08 ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಗಳು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿವೆ.</td></tr>
<tr><td>ಆ)</td><td>ಮಂಡ್ಯ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕೊಠಡಿಗಳು ಮಳೆ-ಗಾಳಿ ಇತರೆ ಕಾರಣಗಳಿಂದ ಹಾನಿಗೊಳಗಾದ ಕೊಠಡಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td>ಮಂಡ್ಯ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಮಳೆ-ಗಾಳಿಯಿಂದ 407 ಪ್ರಾಥಮಿಕ ಶಾಲಾ ಕೊಠಡಿಗಳು ಹಾಗೂ 22 ಪ್ರೌಢಶಾಲಾ ಕೊಠಡಿಗಳು ಹಾನಿಗೊಳಗಾಗಿರುತ್ತವೆ.

ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

<table>
<tr><th>ಕ್ರ.ಸಂ.</th><th>ತಾಲ್ಲೂಕು</th><th colspan="2">ಕೊಠಡಿ ಸಂಖ್ಯೆ</th></tr>
<tr><th></th><th></th><th>ಪ್ರಾಥಮಿಕ</th><th>ಪ್ರೌಢ</th></tr>
<tr><td>1.</td><td>ಕೃಷ್ಣರಾಜಪೇಟೆ</td><td>55</td><td>0</td></tr>
<tr><td>2.</td><td>ಮದ್ದೂರು</td><td>58</td><td>5</td></tr>
<tr><td>3.</td><td>ಮಳವಳ್ಳಿ</td><td>95</td><td>7</td></tr>
<tr><td>4.</td><td>ಮಂಡ್ಯ ಉತ್ತರ ವಲಯ</td><td>10</td><td>0</td></tr>
<tr><td>5.</td><td>ಮಂಡ್ಯ ದಕ್ಷಿಣ ವಲಯ</td><td>45</td><td>0</td></tr>
<tr><td>6.</td><td>ನಾಗಮಂಗಲ</td><td>46</td><td>5</td></tr>
<tr><td>7.</td><td>ಪಾಂಡವಪುರ</td><td>45</td><td>5</td></tr>
<tr><td>8.</td><td>ಶ್ರೀರಂಗಪಟ್ಟಣ</td><td>53</td><td>0</td></tr>
<tr><td></td><td>ಒಟ್ಟು =</td><td>407</td><td>22</td></tr>
</table></td></tr>
<tr><td>ಇ</td><td>ಕಳೆದ ಎರಡು ವರ್ಷಗಳಲ್ಲಿ ಮಳೆ-ಗಾಳಿಯಿಂದ ನಾಗಮಂಗಲ ತಾಲ್ಲೂಕಿನ ಬೆಟ್ಟದಮಲ್ಲೇನಹಳ್ಳಿ ಹಾಗೂ ಇನ್ನಿತರ</td><td>ಹೌದು, ಗಮನಕ್ಕೆ ಬಂದಿದೆ.

• 2019-20ನೇ ಸಾಲಿನಲ್ಲಿ ನಾಗಮಂಗಲ ತಾಲ್ಲೂಕಿನಲ್ಲಿ</td></tr>
</table>

	ಗ್ರಾಮದ ಸರ್ಕಾರಿ ಶಾಲೆ ಕೊಠಡಿಗಳು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಸಂಬಂದ ಹೊಸದಾಗಿ ಕೊಠಡಿ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	ಅಧಿಕ ಮಳೆಯಿಂದ ಹಾನಿಗೊಳಗಾದ ಈ ಕೆಳಕಂಡ ಶಾಲೆಗಳಿಗೆ ಕೊಠಡಿಗಳ ಮರು ನಿರ್ಮಾಣ ಮಾಡಲು ಆರ್.ಐ.ಡಿ.ಎಫ್–25 ಅಡಿಯಲ್ಲಿ ಅನುದಾನ ಮಂಜೂರು ಮಾಡಿದ್ದು, ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

ಕ್ರ.ಸಂ.	ತಾಲ್ಲೂಕು	ಪ್ರಾಥಮಿಕ	ಪ್ರೌಢ
1.	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಶ್ರೀ ರಾಮನಹಳ್ಳಿ	1	11.00
2.	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಬಿ.ಶೆಟ್ಟಿಹಳ್ಳಿ	1	11.00
3.	ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ, ಬೆಳ್ಳೂರು	1	11.00
4.	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊನಕೆರೆ	1	11.00
5.	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಶೆಟ್ಟಿಹಳ್ಳಿ	1	11.00
	ಒಟ್ಟು =	**5**	**55.00**

ಅನುದಾನದ ಲಭ್ಯತೆ ಹಾಗೂ ಆದ್ಯತೆಯ ಮೇರೆಗೆ ಸದರಿ ಶಾಲೆಗಳಿಗೆ ಅನುದಾನ ಒದಗಿಸಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಇಪಿ 64 ಎಲ್‌ಬಿಪಿ 2021

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ
ಸಚಿವರು